**ಕರ್ನಾಟಕ ವಿಧಾನ ಪರಿಷತ್ತು**

| | | |
|---|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | | **144 (09)** |
| **ಮಾನ್ಯ ಸದಸ್ಯರ ಹೆಸರು** | | **ಶ್ರೀ ಬಿ.ಜಿ. ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)** |
| **ಉತ್ತರಿಸುವ ಸಚಿವರು** | | **ಉನ್ನತ ಶಿಕ್ಷಣ ಸಚಿವರು** |
| **ಉತ್ತರಿಸಬೇಕಾದ ದಿನಾಂಕ** | | **08.12.2025** |
| **ಪ್ರಶ್ನೆ** | | **ಉತ್ತರ** |
| ಅ) | ಕಲಬುರಗಿ ವಿಶ್ವವಿದ್ಯಾಲಯದ ಬಿ.ಎಡ್ 2ನೇ ಮ,ತ್ತು 4ನೇ ಸೆಮಿಸ್ಟರ್ ಪರೀಕ್ಷೆ ಮುಗಿದು 10 ತಿಂಗಳು ಕಳೆದರೂ ಫಲಿತಾಂಶ ಪ್ರಕಟಿಸದಿರಲು ಕಾದರಣವೇನು: (ವಿವರ ನೀಡುವುದು) | ಕಲಬುರಗಿ ವಿಶ್ವವಿದ್ಯಾಲಯವು 2024ನೇ ಸಾಲಿನ ಬಿ.ಎಡ್ 2ನೇ ಮತ್ತು 4ನೇ ಸೆಮಿಸ್ಟರ್ ಪರೀಕ್ಷೆಗಳ ಉತ್ತರ ಪತ್ರಿಕೆಗಳ ಮೌಲ್ಯಮಾಪನ ಮಾರ್ಕ್ಸ್‌ಲಿಸ್ಟ್ ನಲ್ಲಿ ಅಂಕಗಳನ್ನು ಮಾಡಿರುವ ಪ್ರಕರಣದ ಕುರಿತು ಹೆಚ್ಚಿನ ತನಿಖೆ ಕೈಗೊಳ್ಳಲು ಸಿ.ಐ.ಡಿ ತನಿಖೆಗೆ ವಹಿಸುವಂತೆ ದಿನಾಂಕ: 16.06.2025ರಂದು ಸರ್ಕಾರವನ್ನು ಕೋರಿರುತ್ತದೆ.<br><br>ಗುಲ್ಬರ್ಗಾ ವಿಶ್ವವಿದ್ಯಾಲಯದಲ್ಲಿ B.Ed ಮೌಲ್ಯಮಾಪನದಲ್ಲಿ ಅಕ್ರಮ ಜರುಗಿರುವ ಈ ಪ್ರಕರಣವನ್ನು ಸರ್ಕಾರವು ಗಂಭೀರವಾಗಿ ಪರಿಗಣಿಸಿ ಸದರಿ ಪ್ರಕರಣದಲ್ಲಿ ಪ್ರಸ್ತಾಪಿಸಿರುವ ಆಪಾದನೆಗಳ ಬಗ್ಗೆ ಪರಿವೀಕ್ಷಣೆ ಮಾಡಿ ಸತ್ಯಾಸತ್ಯತೆ ತಿಳಿಯಲು ಘನತೆವೆತ್ತ ರಾಜ್ಯಪಾಲರು Justice Ramachandra D Huddar, Former Judge, High Court of Karnataka, Bengaluru ಇವರನ್ನು ನೇಮಕ ಮಾಡಿ ದಿನಾಂಕ: 25.08.2025ರಂದು ಅಧಿಸೂಚನೆಯನ್ನು ಹೊರಡಿಸಿರುತ್ತಾರೆ. ಪ್ರಸ್ತುತ ವಿಚಾರಣೆಯು ಪ್ರಗತಿಯಲ್ಲಿರುತ್ತದೆ. |
| ಆ) | ಫಲಿತಾಂಶ ಪ್ರಕಟಗೊಳಿಸದಿದ್ದರಿಂದ ಟಿಇಟಿ. ಏಕಲವ್ಯ ಶಿಕ್ಷಕರ ಹುದ್ದೆಗೆ ಹಾಗೂ ಇನ್ನಿತರ ಹುದ್ದೆಗಳಿಗೆ ಅರ್ಜಿ ಆಹ್ವಾನಿಸಲಾಗಿದ್ದು. ಅರ್ಜಿ ಸಲ್ಲಿಸಲು ಸಾಧ್ಯವಾಗದೆ ವಿದ್ಯಾರ್ಥಿಗಳು ಆಕ್ರೋಶಗೊಂಡು ಜಿಲ್ಲಾಧಿಕಾರಿ ಕಚೇರಿ ಮುಂದೆ ಪ್ರತಿಭಟನೆ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: ಬಂದಿದ್ದಲ್ಲಿ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಫಲಿತಾಂಶ ಪ್ರಕಟಿಸಲು ಸರ್ಕಾರ ಕೈಗೊಂಡ | ಬಂದಿರುವುದಿಲ್ಲ.<br><br>ಆದರೆ, ಗುಲ್ಬರ್ಗಾ ವಿಶ್ವವಿದ್ಯಾಲಯವು ದಿನಾಂಕ: 26.09.2025ರ ಪ್ರಸ್ತಾವನೆಯಲ್ಲಿ ಪ್ರಸ್ತಾಪಿತ ಪರೀಕ್ಷೆಗಳು 2024ರಲ್ಲಿ ನಡೆದಿದ್ದು, ಆ ಸಾಲಿನ ಸೆಮಿಸ್ಟರ್ ಫಲಿತಾಂಶವು ವಿಳಂಬವಾಗಿರುವುದರಿಂದ, ಸಂಬಂಧಪಟ್ಟ ವಿದ್ಯಾರ್ಥಿಗಳು ಬಿ.ಇಡಿ., ಕೋರ್ಸ್ ವ್ಯಾಂಸಗ ಮುಗಿಸಿ ಉನ್ನತ ವ್ಯಾಸಂಗ ಅಥವಾ ಶಿಕ್ಷಕ ಹುದ್ದೆಗಳ ನೇಮಕಾತಿಯಿಂದಾಗಿ ವಂಚಿತರಾಗುವುದಾಗಿ ಹಲವಾರು ಕಾಲೇಜುಗಳ ಪ್ರಾಂಶುಪಾಲರು, ಪಾಲಕರು, ವಿದ್ಯಾರ್ಥಿಗಳು ಹಾಗೂ ವಿದ್ಯಾರ್ಥಿ ಸಂಘಟನೆಗಳು ಸೇರಿದಂತೆ ಆ ಭಾಗದ ಹಿತಚಿಂತಕರು ಸಹ ತಕ್ಷಣ ಫಲಿತಾಂಶ ಪ್ರಕಟಿಸುವಂತೆ ವಿಶ್ವವಿದ್ಯಾಲಯವನ್ನು ಕೋರಿರುವುದರಿಂದ, ಸದರಿ ಪ್ರಕರಣದಲ್ಲಿ ತಿದ್ದುಪಡಿಯಾಗಿರುವ ಉತ್ತರ ಪತ್ರಿಕೆಗಳನ್ನು ಮಾತ್ರ |

| | | |
|---|---|---|
| | ಕ್ರಮಗಳೇನು: (ವಿವರ ನೀಡುವುದು) | ಮತ್ತೊಮ್ಮೆ ಮೌಲ್ಯಮಾಪನ ಮಾಡಿ ಫಲಿತಾಂಶ ಪ್ರಕಟಿಸಲು ವಿಶ್ವವಿದ್ಯಾಲಯವು ಸರ್ಕಾರದ ಅನುಮತಿಯನ್ನು ಕೋರಿದ್ದು, ಪ್ರಸ್ತುತ ಪ್ರಸ್ತಾವನೆಯು ಕಾನೂನು ಇಲಾಖೆಯ ಪರಿಗಣನೆಯಲ್ಲಿರುತ್ತದೆ. |
| ಇ) | ಎಲ್ಲಾ ಸೆಮಿಸ್ಟರ್‌ಗಳ ಮೂಲ ಅಂಕಪಟ್ಟಿಗಳನ್ನು ವಿತರಿಸಲು ಹಾಗೂ ಬಿ.ಎಡ್ ಪರೀಕ್ಷಾ ಶುಲ್ಕ ಕಡಿಮೆ ಮಾಡಲು ಮತ್ತು ಘಟಿಕೋತ್ಸವ ಪ್ರಮಾಣ ಪತ್ರ ನೀಡುವ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ? (ವಿವರ ನೀಡುವುದು) | ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ, 2000ರ ಪ್ರಕರಣ 40(ಡಿ) ರನ್ವಯ ವಿಶ್ವವಿದ್ಯಾಲಯವು ರಚಿಸಿಕೊಂಡಿರುವ ಪರಿನಿಯಮದನುಸಾರ ಅಂಕಪಟ್ಟಿಗಳನ್ನು ಮತ್ತು ಘಟಿಕೋತ್ಸವ ಪ್ರಮಾಣಪತ್ರಗಳನ್ನು ನೀಡಲು ವಿಶ್ವವಿದ್ಯಾಲಯವು ಕ್ರಮವಹಿಸಲು ಅವಕಾಶವನ್ನು ಕಲ್ಪಿಸಲಾಗಿದ್ದು, ಅದರನ್ವಯ ಆಯಾ ವಿಶ್ವವಿದ್ಯಾಲಯಗಳು ಘನತೆವೆತ್ತ ಕುಲಾಧಿಪತಿಗಳ ಅಧ್ಯಕ್ಷತೆಯಲ್ಲಿ (ಕುಲಾಧಿಪತಿಗಳ ಅನುಪಸ್ಥಿತಿಯಲ್ಲಿ ಮಾನ್ಯ ಇಲಾಖಾ ಸಚಿವರ ಅಧ್ಯಕ್ಷತೆಯಲ್ಲಿ) ಘಟಿಕೋತ್ಸವ ಪ್ರಮಾಣಪತ್ರಗಳನ್ನು ವಿತರಿಸಲು ಕ್ರಮವಹಿಸುತ್ತವೆ.<br><br>ಸರ್ಕಾರದ ಅಧಿಸೂಚನ ಸಂಖ್ಯೆ: ಇಡಿ 131 ಯುಆರ್‌ಸಿ 2000, ದಿನಾಂಕ: 22.07.2000ರಲ್ಲಿ ಸರ್ಕಾರಿ, ಅನುದಾನಿತ ಹಾಗೂ ಖಾಸಗಿ ಅನುದಾನರಹಿತ ಶಿಕ್ಷಣ ಮಹಾವಿದ್ಯಾಲಯಗಳಲ್ಲಿ ಬಿ.ಇಡಿ., ಕೋರ್ಸ್‌ನ್ನು ಒಳಗೊಂಡಂತೆ ಬೋಧನಾ ಶುಲ್ಕ, ಅಭಿವೃದ್ಧಿ ಶುಲ್ಕ ಮತ್ತು ಇನ್ನಿತರೆ ಶುಲ್ಕವನ್ನು ನಿಗದಿಪಡಿಸಿ ಅಧಿಸೂಚನೆ ಹೊರಡಿಸಲಾಗಿರುತ್ತದೆ. ಸದರಿ ಅಧಿಸೂಚನೆಯನ್ವಯ ಬಿ.ಎಡ್ ಪರೀಕ್ಷಾ ಶುಲ್ಕವು ಕಡಿಮೆಯಿದ್ದು, ಸದರಿ ಶುಲ್ಕವನ್ನೇ 2000 ದಿಂದ 2025ರವರೆಗೂ ಮುಂದುವರೆಸಿಕೊಂಡು ಬರಲಾಗಿದೆ.<br><br>ಪ್ರಸ್ತುತ ಸರ್ಕಾರದ ಆದೇಶ ಸಂಖ್ಯೆ: ಇಡಿ 57 ಯುಆರ್‌ಸಿ 2022 (ಇ), ದಿನಾಂಕ: 16.08.2025ರಲ್ಲಿ The National Council for Teacher Education (Guidelines for regulation of tuition fees and other fees chargeable by unaided teacher education institutions) Regulations, 2002 and amendment Regulations, 2010ರ ತಿದ್ದುಪಡಿ ಅಧಿಸೂಚನೆಗಳನ್ವಯ ಶಿಕ್ಷಣ ಮಹಾವಿದ್ಯಾಲಯಗಳ ಬಿ.ಇಡಿ., ಪ್ರವೇಶಾತಿ ಸಂಬಂಧಿಸಿದಂತೆ ಬೋಧನಾ, ಅಭಿವೃದ್ಧಿ ಮತ್ತು ಮತ್ತಿತರ ಶುಲ್ಕಗಳನ್ನು ಪರಿಷ್ಕರಿಸಲು ರಾಜ್ಯ ಮಟ್ಟದ ಸಮಿತಿಯನ್ನು ರಚಿಸಲಾಗಿದ್ದು, ಸದರಿ ಸಮಿತಿಯು ಕಾರ್ಯಪ್ರಗತಿಯಲ್ಲಿರುತ್ತದೆ. |

**ಸಂಖ್ಯೆ: ಇಡಿ 162 ಯುಜಿವಿ 2025**

**(ಡಾ: ಎಂ.ಸಿ. ಸುಧಾಕರ್)**

**ಉನ್ನತ ಶಿಕ್ಷಣ ಸಚಿವರು**